Seshadripuram Educational Trust
SINCE 1930
INSTITUTIONS
ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ, ಬೆಂಗಳೂರು–560020
www.set.edu.in | info@set.edu

# Vani
## The Voice of Excellence

ಶೈಕ್ಷಣಿಕ, ಸಾಂಸ್ಕೃತಿಕ, ತ್ರೈಮಾಸಿಕ ಪತ್ರಿಕೆ

Volume - 32
Edition - 4
April - 2020



‘ಜೈನಧರ್ಮ: ಶಿಷ್ಟ ಮತ್ತು ಜಾನಪದ ಸಾಹಿತ್ಯ’ ರಾಷ್ಟ್ರಮಟ್ಟದ ವಿಚಾರ ಸಂಕಿರಣ 10



ಡಿ|| ಕೆ.ಎಂ. ನಂಜಪ್ಪರವರ ಸ್ಮರಣಾರ್ಥ ಬೃಹತ್ ರಕ್ತದಾನ ಮೇಳ 11



ಕಾಲೇಜು ವಾರ್ಷಿಕೋತ್ಸವ–‘ಅನುಬಂಧ 2019’ 11




‘ವಿಸ್ಮಯ ಪ್ರಪಂಚ’ ವಸ್ತುಪ್ರದರ್ಶನ 10



ಶೇಷಾದ್ರಿಪುರಂ ಪ್ರೌಢಶಾಲೆಯ ವಾರ್ಷಿಕೋತ್ಸವ 8



National Science Day 2020 5



Seshadripuram Academy for Global Excellence (S.A.G.E.) 12



Mahatma Gandhiji's 150th Birth Anniversary 5



ಯುವಜನ ಜಾಗೃತಿ ಸಮ್ಮೇಳನ 2019–20 9

**For Internal Circulation only**

Book-Post

To,

If undelivered, please return it to:
Editor, 'Vani' Quaterly Newsletter
Seshadripuram Educational Trust,
No.27, Nagappa Street,
Seshadripuram, Bengaluru - 560020

**Managing Editor**
N.R. Pandítharadhya

**Chief Editor**
Dr Wooday P. Krishna

**Creative Advisor**
Nalini Harish

**Editors**
Tejaswini P.
Dr Kavyashree H.
Shantamma

**Editorial Board**

S. Sesha Narayana
W.G. Ramakrishna
B.S. Lokanath
P.C. Narayana
M.S. Nataraj
Dr G. Vatsala
Dr Bhargavi V.R.
Dr Meera H.N.
Dr Pranitha B.S.
Dr S.N. Venkatesh
Prof. Jayaram
Prof. N.S. Satish
Prof. Sowmya Irappa K.
Prof. Jagadish T.G.
Prof. Vidya Shivannavar
Prof. Manjunath R.V.
Prof. G.K. Manjunath
Prof. R. Mahalakshmi
Dr R. Manjunath
Prof. T. Doddegowda
Prof. Archana Swami N.
Prof. B.V. Basavaraju
Prof. Sumati C.
Ekambareshwara
Netramani
Geetha M.
K. Kavitha
Parimala L.K.
H.N. Nanda

# Editorial

As the entire globe cowers under the Corona threat; life has come to a standstill. Educational institutions have been shut down as have so many other aspects of life.

This is important as the average student travels quite a distance via crowded public transport like buses or metros to come sit in packed classrooms. Children are also known to commute to schools in jam-packed autos through seas of traffic. Being young, they have fragile immune systems not to mention an inability to perhaps follow necessary measures and maintain extra care and hygiene which is a must under the given circumstances. Educational institutions in general are places where people come in close contact with several others and thus risky.

It is imperative that people understand the significance of the holidays and do not utilise it to socialise outside or travel. This not only puts themselves at risk but also others as they may pass the virus to others. Quarantining is vital to stop the spread of an epidemic that is new and that as a system we are ill-equipped to handle. While one must be alert to notice symptoms if any, it is important to also remain calm and not panic.

One can discover the joy of staying indoors and the bliss of solitude and make the most of this time period. One can indulge in hobbies or enjoy time with one's family and get some much needed rest and relaxation within the safety of our homes. Let us hope that soon we are able to get back to our routines safe and more productive.

**Editor**
editorialvani@gmail.com

For suggestions & feedback mail us at : editorialvani@gmail.com

## ಸಂತಾಪ

### ಎಂ. ಗೋಪಾಲ್



ಎಂ. ಗೋಪಾಲ್‌ರವರು ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಧರ್ಮದರ್ಶಿಯಾಗಿ ಕೆಲಸ ನಿರ್ವಹಿಸುತ್ತಿದ್ದರು. ಯಲಹಂಕದ ಪದವಿಪೂರ್ವ ಕಾಲೇಜಿನಲ್ಲಿ ಗವರ್ನಿಂಗ್ ಕೌನ್ಸಿಲ್ ಹಾಗೂ ಕ್ಯಾಂಟೀನ್ ಸಬ್‌ಕಮಿಟಿ ಆಫ್ ದ ಟ್ರಸ್ಟ್‌ನ ಚೇರ್ಮನ್‌ರಾಗಿ ಸೇವೆ ಸಲ್ಲಿಸಿದ್ದಾರೆ. ಶ್ರೀಯುತರ ಅಗಲಿಕೆಗೆ ಶೇಷಾದ್ರಿಪುರಂ ಶಿಕ್ಷಣ ದತ್ತಿ, ಅಂಗ ಸಂಸ್ಥೆಗಳ ಮುಖ್ಯಸ್ಥರು ಹಾಗೂ ವಾಣಿ ಬಳಗ ಸಂತಾಪ ಸೂಚಿಸುತ್ತದೆ.




## In the Media


Mon, 10 February 2020


ಪ್ರಜಾವಾಣಿ ಸೋಮವಾರ • ಮಾರ್ಚ್ 2, 2020
'ವಿಜ್ಞಾನ ಜನರಿಂದ ಬೆಳೆಯಬೇಕು'


ಹೆಲ್ಮೆಟ್ ಧರಿಸಿದರೆ ಯುವಜೀವ ಸೇಫ್


ವಿದ್ಯಾರ್ಥಿಗಳು ಮೌಲಿಕ-ಆಧ್ಯಾತ್ಮಿಕ ಶಿಕ್ಷಣಕ್ಕೆ ಒತ್ತು ನೀಡಬೇಕು


ವಿಜಯ ಕರ್ನಾಟಕ
ಜಿಲ್ಲೆಗಳ ಗಾಂಧಿ ಭವನ ನಿರ್ಮಾಣಕ್ಕೆ ಗ್ರಹಣ


ಹೊಸ ದಿಗಂತ
ಮಂಗಳವಾರ 11 ಫೆಬ್ರವರಿ 2020
ಪ್ರಕೃತಿಯಿಂದ ದೂರಾದಷ್ಟೂ ದುಷ್ಪರಿಣಾಮ


ಉದಯವಾಣಿ
ಅಹಿಂಸಾತ್ಮಕ ಪ್ರತಿಭಟನೆ ಮಹಾತ್ಮ ಗಾಂಧೀಜಿ ತತ್ವ


ಪ್ರಜಾವಾಣಿ ಸೋಮವಾರ • ಮಾರ್ಚ್ 2, 2020
ಕಸ್ತೂರ ಬಾ ಗಾಂಧಿಯ ಪುತ್ಥಳಿ ಲೋಕಾರ್ಪಣೆ
'ಗಾಂಧೀಜಿಗೆ ಕಸ್ತೂರ ಬಾ ಪ್ರೇರಕ ಶಕ್ತಿ'

"ವರುಷ ಹರುಷ ನವಪಲ್ಲವ ತೋರಣದಲಿ ಬಳುಕಲಿ ತಾಯೊಲವಿನ ವಜ್ರದೀಪ ನಮ್ಮೆದೆಯಲಿ ಬೆಳಗಲಿ!" – ಕೆ.ಎಸ್. ನರಸಿಂಹಸ್ವಾಮಿ

# Congratulations



## Dr Wooday P. Krishna

On 19 Feb. 2020, Educationist Dr Wooday P. Krishna was felicitated at the Leaders' Fest organised by Sri Vidyanag and Sri Karigiri Prasad at Chowdaiah Memorial Hall, Bengaluru. Young Leader and Entrepreneur Abhishekh and others were present.

## New Principal

### Dr Meera H. N.

M.Com., M.Phil., P.hD.



Dr Meera H.N. took charge as Principal, Seshadripuram College in December, 2019 prior to which she served as Vice-Principal in the same institution. With over twenty years of experience in teaching, Dr Meera began her career at Sri Sai College for Women and Nijalingappa College, Rajajinagar following which she gained experience in a number of colleges across the city such as- Adarsha Degree College and Sindhi College of Commerce where she was Head of the Department of Management as well as Seshadripuram First Grade College, Yelahanka where she was BBM Co-ordinator.

Dr Meera has completed her postgraduate degree from Bangalore University, M.Phil. from Alagappa University, Tamil Nadu and P.hD. from Karnataka Folklore University, Haveri.

She has several paper presentations at national and international conferences and journal publications in reputed UGC-approved journals to her credit. She has also authored four books regarding- Non-Farm Entrepreneurs, Rural Enterprises Finance, HR in Rural Enterprises and the Rural Market.

Madam has also fulfilled university responsibilities such as- reviewing, paper setting and being viva-voce examiner. In addition, she has also guided a number of student projects at both the undergraduate and postgraduate level.

Apart from her academic credentials, Dr Meera is also a trained Kuchupudi dancer who has numerous state-level performances under her belt along with which she has had many students under her tutelage. She is also an experienced television and theatre artiste who features regularly in a number of serials, dramas and documentaries where she has worked with many reputed directors.

## Ph.D. Awarded

### Manjula V.



On 3 Jan. 2020. Manjula V., Head, Dept. of Commerce and Management, Seshadripuram Academy of Business Studies, Kengeri has been awarded Ph.D. degree on the topic, "Dimensions of Industrial Relations on Organisational Performance - A Comparative Study between Public and Private Sector Undertakings" from Bharathiar University.

Vani Team congratulates all the achievers

## ಡಿ.ಲಿಟ್. ಪದವಿ ಪುರಸ್ಕೃತರು



### ವಾಸುದೇವ ಬಿ.ಎ.

ತುಮಕೂರಿನ ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನಲ್ಲಿ ಸೇವೆ ಸಲ್ಲಿಸುತ್ತಿರುವ ಬಿ.ಎ. ವಾಸುದೇವ ಅವರಿಗೆ ಗೌರವ ಡಿ.ಲಿಟ್. ಪದವಿ ಲಭಿಸಿದೆ. ಬೊಲಿವಿಯಾದ ಯೂನಿವರ್ಸಿಟಿ ಆಫ್ ಸೆಂಟ್ರಲ್ ಅಮೆರಿಕಾ ಈ ಪದವಿಯನ್ನು ಪ್ರದಾನ ಮಾಡಿದೆ. ಇವರನ್ನು ಸಂಸ್ಥೆ ಅಭಿನಂದಿಸುತ್ತದೆ.

# Acheivements



On 26 Jan. 2020, NSS volunteer Dhanush C. M. of Seshadripuram Academy of Business Studies, Kengeri was selected for the State-level Republic Day parade held at Marshal Manekshaw Parade Grounds.

Jeevan S. of Seshadripuram Independent P.U. College, Magadi Road, Bengaluru has won the 1st Place in the All-Indian Day and Night Men's & Women's Cricket Championship League held at Jaipur (Rajasthan).





Rakshitha N., student of Seshadripuram Independent Pre-University College, Mysuru has secured the 1st place in the 5th State-level Stick Fighting Tournament 2019, organised by the Karnataka Sports Silambam Association, at Smt. Leela, Sri H. Chennaiah Kalyana Mantapa, Mysuru.

The Fencing team of Seshadripuram First Grade College, Yelahanka won the Overall Championship at the Inter Collegiate Fencing Competition organised by Bangalore University & Bengaluru Central University.





On 11-12th Jan. 2020, the Throwball Women's Team of Seshadripuram First Grade College, Yelahanka won the 1st Place at the National Games organised by Students' All Games Activities Development Foundation, Mysore.

The sports team of Seshadripuram First Grade College, Yelahanka also received several accolades at the National, South Zone, All India Inter- University and State-level sports events.






On 8th and 9th Nov. 2019, the Throwball Women's Team of Seshadripuram First Grade College, Yelahanka won the I place at the State-level Inter-collegiate Throwball Competition 2019-20 organised by HKBK Degree College, Bengaluru.

"Take risks in your life. If you win, you can lead. If you lose, you can guide." – Swami Vivekananda

# Seshadripuram College
Seshadripuram

## Seshadripuram Sports Achievements


Nikkhil B.R. and Biju Mondal of III B. Com Secured silver medal in the 14th National Floorball Championship.


Winners of the Bengaluru Central University Inter-Collegiate Chess Men's Championship 2019-20.


Winners of SPORTSTAKES 2020 - St. Joseph's Throwball Men's Competition.


Winners in Bengaluru Central University Inter-Colligate Chess Women's Championship.


Winners in Bangalore University Inter-Collegiate Table Tennis Men's Championship 2019-20.


Winners of Best Poser, Mr. Bengaluru Central University and Most Muscular 2019-20.


Runners-up in Bengaluru Central University Table Tennis Women's Championship 2019-20.


Winners in Bangalore University Inter-Collegiate Floorball Men's Competition 2019-20.


Winners in Bangalore University Inter-College Cricket T-20 Tournament 2019-20.


Winners in Bangalore University Inter-Collegiate Boxing Men's Championship 2019-20.


20 Students participated in Throwball, Weightlifting, Netball, Wrestling and Handball competitions and secured 2 gold medals, 3 silver medals 5 bronze medals in various games.


On 11 & 12th Jan. 2020, the Throwball Men's Team of SFGC, Yelahanka won the Throwball Championship at the National Games organised by Students All Games Activities Development Foundation, Mysore,

# Events

## Seshadripuram P.U. College (Main)
Seshadripuram

### Vivekananda Jayanthi



On 6 Jan. 2020, Vivekananda Study Centre, SPUC, Main College organised a Speech Competition on the occasion of Swamy Vivekananda Jayanthi.

## Seshadripuram Commerce College
Magadi Road, Bengaluru

### Mega Blood Donation Festival


On 29 Jan. 2020, S.C.C.'s Youth Red Cross Unit organised a Mega Blood Donation Festival in association with Karnataka Voluntary Blood Donors, Indian Red Cross Blood Bank. The event was in the memory of Sri K.M. Nanjappa. Sri Bhaskar, Director of Community Service was the Chief guest for the event.

"ವರುಷಕೊಂದು ಹೊಸತು ಜನ್ಮ ವರುಷಕೊಂದು ಹೊಸತು ನೆಲೆಯು ಅಖಿಲ ಜೀವಜಾತಕೆ, ಒಂದೇ ಒಂದು ಜನ್ಮದಲ್ಲಿ ಒಂದೇ ಬಾಲ್ಯ ಒಂದೇ ಹರಯ ನಮಗದಷ್ಟೆ ಏತಕೋ ನಿದ್ದೆಗೊಮ್ಮೆ ನಿತ್ಯ ಮರಣ ಎದ್ದ ಸಲ ನವೀನ ಜನನ ನಮಗೆ ಏಕೆ ಬಾರದೋ" – ದ.ರಾ. ಬೇಂದ್ರೆ

## Seshadripuram Composite P. U. College
Seshadripuram

### Annual Alumni Meet - 'Anveshan'



On 18 Jan. 2020, S.C.P.U.C. organised the Annual Alumni Meet - 'Anveshan'. Sri Prakhar Pandey, K.A.S. officer, Commercial Taxes and G.S.T. Department and Alumnus, Batch 2014 was the Chief guest. Smt. Kalyani S., Cine Actress, Alumnus and Sri Syed Irfan, Cine Actor, Alumnus, were the Guests of Honour.

### Annual Day - 'Compfest 2020'



On 22 Dec. 2019, S.C.P.U.C. celebrated its Annual Day Compfest. The Chief guest for the occasion was Dr K.P. Puthuraya, Former Director, Rajiv Gandhi Health University, Writer, Orator and Educationist.

## Seshadripuram Academy of Business Studies
Kengeri

### Mahatma Gandhiji's 150th Birth Anniversory



On 11 Jan. 2020, S.A.B.S in association with Karnataka Gandhi Smaraka Nidhi, G.R. College of Arts, Science& Commerce celebrated Mahatma Gandhiji's 150th Birth Anniversory and Gandhian Dr H. Narasimhaiah's Centenary year. Dr Venugopal, Hon. Vice Chancellor, Bangalore University inaugurated the programme, B.T. Lalitha Naik, Former Minister, Writer and Social Activist was also present. Dr Geetha Ramanujam presided over the programme. The Valedictory session was attended by Dr T. Siddalingaiah and Shudra Srinivas.

### 9th State-Level Inter-Collegiate Fest - 'Dhvani 2020'



On 26 Feb. 2020, S.A.B.S celebrated 9th State-level Inter-collegiate U.G. Fest - Dhvani 2020. The Chief guest on this occasion was Dr Rupa Vasudevan, Co-Founder and Chancellor, B.E.S.T. Innovation University. The Guests for the Valedictory function were Sri V. Chanadraiah, Founder & Secretary, St. Philomena's Group of Institutions and Prof. Ganesh, Dept. of Political Science, Evening Degree College.

## Seshadripuram First Grade College
Yelahanka

### Bharatiya Uthsava 2020



On 6 Feb. 2020, Bharatiya Uthsava - a unique programme was organised by the Cultural Committee, SFGC for the students to showcase their true sense of solidarity, unity in diversity and secularism. The celebrations encouraged the students to embrace our traditions and culture.

### Swami Vivekananda Jayanti



On 19 Jan. 2020, S.F.G.C. celebrated Swami Vivekananda Jayanti and to mark the celebrations Smt. Rekha Ramchandran, Founder and Director of Disha Charitable Trust rendered a life transforming talk on the occasion.

### Mega Voluntary Blood Donation Festival



On 19 Feb. 2020, S.F.G.C. organised a Mega Voluntary Blood Donation Festival to commemorate the 108th Birth Anniversary of Late Sri K. M. Nanjappa, Former President, S.E.T. and Former Mayor, Bengaluru in association with India Red Cross Society. On this day, 435 of blood pints were collected. S. Naganna, Chairman of I.C.R.C.-K.S.B. and Raju Chandrashekar inaugurated and graced the occasion.

### National Science Day 2020



On 28 Feb. 2020, S.F.G.C. organised - National Science Day celebrations. Bharat Ratna Dr C. N. R. Rao and Indian Science Congress Association General President Dr K.S. Rangappa were felicitated on the occasion.

"Education is the manifestation of the perfection already in man." – Swami Vivekananda

## Fidelity National Financial India Visits S.F.G.C.



On 14 Jan. 2020, The CEO of Fidelity National Investment India, Andy Giddings visited S.F.G.C. campus along with his management team. On the day, around 130 letters of intent were issued to the students of S.E.T. placed in Fidelity.

## Seshadripuram Public School
Yelahanka

### Annual Day - 'Anwesha 2019-20'



On 1 Feb. 2020, S.P.S., Yelahanka celebrated its Annual Day - Anwesha 2019-20. The Chief guest for the day was Sri Prakash K.S., Head – H.R.D. Division, ISRO, Bengaluru.

## Seshadripuram Institute of Management Studies
Yelahanka

### Awareness Programme on - 'Waste Management'



On 3 Feb. 2020, Rotaract Club of Seshadripuram Institute of Management Studies organised an awareness programme for the students on the topic of - "Waste Management and Segregation". The event commenced with an introduction session by Rtr. President Midhuna S., Rtr. Sergeant in Arms Srikanth took over the event. He spoke on the process of waste management as well as the benefits of waste management and segregation.

### Workshop on - 'Leadership Skills'



On 9 and 13 Jan. 2020, S.I.M.S. organised a Two-Day Workshop which was piloted by Mr. Ramani Venkat, Corporate Mentor and Trainer, Bizz Diagnostics and Cool Guru L.L.P. Mr. Ramani covered a variety of topics relating to leadership skills such as career planning, goal setting, communication skill sets and decision making. He also spoke on the difference between IQ and EQ and how important time management is for an MBA graduate.

## Seshadripuram Law College
Seshadripuram

### Guest Lecture on, 'Arbitration and Advantages of A.D.R.'



On 4 Mar. 2020, S.L.C., Seshadripuram had organised a guest lecture on "Arbitration and Advantages of A.D.R." and the Resource person was Kiran Bettadapur, Advocate and Patent Attorney.

### Guest Lecture on, 'The Institute of Chartered Accountants of India'



On 18 Feb. 2020, S.L.C., Seshadripuram had organised a Guest Lecture on "The Institute of Chartered Accountants of India" and the Resource person was Mr Sandeep.

## Seshadripuram Independent Pre-University College
Kengeri

### Alumni Meet 2019-20



On 15 Feb. 2020, S.I.P.U.C., Kengeri had organised Alumni Meet 2019-20. Sri Saleem Shaik, Asst. Range Forest Officer, International Athletic and an Alumnus was the Chief guest.

### Xplore – Science Fest – 2020



On 7 Jan. 2020, S.I.P.U.C. organised – Xplore – Science Fest – 2020 in association with Breakthrough Science Society. The Chief guests were Prof. Jayanth Murthy, Indian Institute of Astrophysics and Sri G. Satish Kumar, Software Architect, State President, Breakthrough Science Society.

"ತೊಲಗಲಿ ದುಃಖ, ತೊಲಗಲಿ ಮತ್ಸರ, ಪ್ರೇಮಕೆ ಮೀಸಲು ನವ ಸಂವತ್ಸರ!" – ಕುವೆಂಪು

## Seshadripuram Institute of Commerce and Management
Seshadripuram

### 'Samsrusti 2020'



On 28 Feb. 2020, S.I.C.M. conducted - Samsrusti 2020 as Inter-collegiate Cultural, Commerce and Bhasha Sangama Fest.

### Annual Alumni Meet-2020



On 15 Feb. 2020, S.I.C.M., organised its Annual Alumni Meet-2020. The Chief guest for the event was Dr Wooday P. Krishna, Hon. Secretary, S.E.T. Dr Krishna launched the alumni website - www.nexussicm.com.

### One-Day Workshop on, 'The Role of Educational Institutions in Promoting Greening India'




On 6 Feb. 2020, S.I.C.M., organised a One-Day workshop on, "The Role of Educational Institutions in Promoting Greening India". The Resource persons for the workshop were - Dr N.H. Ravindranath, Retd. Professor of Indian Institute of Science, Dr Indu K. Murthy, Consultant Scientist, Indian Institute of Science and Prof. Anita Arekal, Additional Principal, Social Forestry.

### Student Interface on - 'Modern Media an Value System'



On 24 Feb. 2020, S.I.C.M., in association with Gandhi Bhavan's Centre of Science and Human Values organised Student Interface on, "Modern Media an Value System". The Chief guest was Sri N.S. Sreedhara Murthy, Director, Maashyama Bharathi, Bharatiya Vidya Bhavan, the session was presided by Dr Meena Deshpande.

## Seshadripuram Independent P. U. College
Magadi Road, Bengaluru

### Alumni Meet - 'Samagama 2020'




On 15 Feb. 2020, S.I.P.U.C. Magadi Road organised its Alumni Meet-Samagama 2020. Sri Thirumala M., Assistant Professor, Government First Grade College, Sira and Sharath Shanbagh T., Charted Accountant, M/S Shyanbhoga Hedge and Associates were the Guests of Honor.

## ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜು
ಶೇಷಾದ್ರಿಪುರಂ

### 49ನೇ ಕಾಲೇಜು ವಾರ್ಷಿಕೋತ್ಸವ




ಶೇಷಾದ್ರಿಪುರಂ ಸಂಜೆ ಪದವಿ ಪೂರ್ವ ಕಾಲೇಜಿನಲ್ಲಿ 49ನೇ ಕಾಲೇಜು ವಾರ್ಷಿಕೋತ್ಸವ ಸಮಾರಂಭವನ್ನು ಯೋಗ ತಜ್ಞರು ಮತ್ತು ಭಾರತೀಯ ವಿಜ್ಞಾನ ಸಂಸ್ಥೆಯ ಮುಖ್ಯ ಸಂಶೋಧನಾ ವಿಜ್ಞಾನಿ ಡಾ. ಎಸ್.ಎನ್. ಓಂಕಾರ್ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಧರ್ಮದರ್ಶಿಗಳಾದ ಡಬ್ಲ್ಯೂ.ಡಿ. ಅಶೋಕ್, ಕೆ. ಕೃಷ್ಣಸ್ವಾಮಿ, ಲೋಕನಾಥ್ ಮತ್ತು ರಾಮಸ್ವಾಮಿ ಹಾಗೂ ಪ್ರಾಂಶುಪಾಲರಾದ ಪ್ರೊ. ಆರ್. ಮಹಾಲಕ್ಷ್ಮೀ ಮತ್ತು ಎನ್.ಎಸ್. ಸತೀಶ್ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್
ಕೆಂಗೇರಿ

### ನಾಗರಿಕ ರಕ್ಷಣಾ ಸಮಿತಿಯಿಂದ ವಿದ್ಯಾರ್ಥಿಗಳಿಗಾಗಿ ಸಂವಾದ



18.02.2020ರಂದು ಕಾಲೇಜಿನಲ್ಲಿ ನಾಗರಿಕ ರಕ್ಷಣಾ ಸಮಿತಿಯ ವತಿಯಿಂದ ವಿದ್ಯಾರ್ಥಿಗಳಿಗಾಗಿ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಬೆಂಗಳೂರಿನ ಹೈಕೋರ್ಟ್ ಪೊಲೀಸ್ ಸ್ಟೇಷನ್‌ನ ಸೈಬರ್ ಕ್ರೈಂ ವಿಭಾಗದಲ್ಲಿ ಎ.ಸಿ.ಪಿ.ಯಾಗಿರುವ ಯಶವಂತ್ ಕುಮಾರ್ ಕೆ.ಎನ್. ಅವರು ಸಂವಾದವನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊಫೆಸರ್ ಜಯರಾಮ್ ಉಪಸ್ಥಿತರಿದ್ದರು.

### ಎನ್.ಸಿ.ಸಿ. ಪಥಸಂಚಲನ ಸ್ಪರ್ಧಾ ವಿಜೇತರು




25.02.2020ರಂದು ಕಾಲೇಜಿನ ಎನ್.ಸಿ.ಸಿ. ವಿದ್ಯಾರ್ಥಿಗಳು ಮಹಾರಾಣಿ ಕಲಾ, ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಬೆಂಗಳೂರು, ಇವರು ಆಯೋಜಿಸಿದ ಅಂತರಕಾಲೇಜು ಎನ್.ಸಿ.ಸಿ. ಪಥಸಂಚಲನ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಪ್ರಶಸ್ತಿ ಪಡೆದಿದ್ದಾರೆ.

"A nation is advanced in proportion to education and intelligence spread among the masses." – Swami Vivekananda

## ಶೇಷಾದ್ರಿಪುರಂ ಪ್ರೌಢಶಾಲೆ
ಶೇಷಾದ್ರಿಪುರಂ

### ಶ್ರೀ ಕೆ.ಸಿ. ಪುಟ್ಟನರಸಯ್ಯನವರ ಸ್ಮರಣಾರ್ಥ ದೇವರನಾಮ ಗಾಯನ ಸ್ಪರ್ಧೆ



25.11.2019ರಂದು ಶ್ರೀ ಕೆ.ಸಿ. ಪುಟ್ಟನರಸಯ್ಯನವರ ಸ್ಮರಣಾರ್ಥ 2019–2020ನೇ ಸಾಲಿನ 13ನೆಯ ಅಂತರ ಪ್ರೌಢಶಾಲಾ ದೇವರನಾಮ ಗಾಯನ ಸ್ಪರ್ಧೆ ಮತ್ತು 'ವೈಣಿಕ ಶಿಖಾಮಣಿ' ಮೈಸೂರು ವೀಣೆ ಶೇಷಣ್ಣ ಸ್ಮರಣಾರ್ಥ 8ನೆಯ ಅಂತರ ಪ್ರೌಢಶಾಲಾ ವಾದ್ಯಸಂಗೀತ ಸ್ಪರ್ಧೆ ನಡೆದವು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಕಲಾ ವಿದೂಷಿ ಪಿ. ರಮಾ ಆಗಮಿಸಿದ್ದರು. ವಿಶೇಷ ಆಹ್ವಾನಿತರಾಗಿ ಧರ್ಮದರ್ಶಿ ಪ್ರೊ. ಕೆ.ಪಿ. ನರಸಿಂಹಮೂರ್ತಿ ಹಾಗೂ ಸಂಗೀತ ಕಲಾರತ್ನ ಮೈಸೂರು ವಿ. ಸುಬ್ರಹ್ಮಣ್ಯ ಸಹ ಆಗಮಿಸಿದ್ದರು. ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣರವರು ಅಧ್ಯಕ್ಷತೆಯನ್ನು ವಹಿಸಿ, ಈ ಕಾರ್ಯಕ್ರಮಕ್ಕೆ ಸ್ಪರ್ಧಿಗಳನ್ನು ರಾಜ್ಯದ ಎಲ್ಲೆಡೆಯಿಂದ ಆಹ್ವಾನಿಸುವಂತೆ ಸಲಹೆ ನೀಡಿದರು.

### ದಿ॥ ಜಿ.ಕೆ. ಚಿಕ್ಕನರಸಿಂಹಯ್ಯನವರ ಸ್ಮರಾಣಾರ್ಥ ಕನ್ನಡ ಚರ್ಚಾ ಸ್ಪರ್ಧೆ



26.11.2019ರಂದು ಮಾಜಿ ಕೋಶಾಧ್ಯಕ್ಷರಾದ ದಿವಂಗತ ಜಿ.ಕೆ. ಚಿಕ್ಕನರಸಿಂಹಯ್ಯನವರ ಸ್ಮರಾಣಾರ್ಥ 49ನೇ ಅಂತರ ಪ್ರೌಢಶಾಲಾ ವಿದ್ಯಾರ್ಥಿಗಳ ಕನ್ನಡ ಚರ್ಚಾಸ್ಪರ್ಧೆಯನ್ನು ನಡೆಸಲಾಯಿತು. ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜುರವರು ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರೊ. ಎಸ್.ಕೆ. ನಾಯಕ್ ಆಗಮಿಸಿದ್ದರು. ಈ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಾದ ಪ್ರೀತಿ ಮತ್ತು ದೀಪಿಕಾ ಅವರು ಪರ್ಯಾಯ ಪಾರಿತೋಷಕವನ್ನು ಪಡೆದು ಶಾಲೆಗೆ ಕೀರ್ತಿಯನ್ನು ತಂದಿದ್ದಾರೆ.

### ಶೇಷಾದ್ರಿಪುರಂ ಪ್ರೌಢಶಾಲೆಯ ವಾರ್ಷಿಕೋತ್ಸವ



21–12–2019ರಂದು ಶೇಷಾದ್ರಿಪುರಂ ಪ್ರೌಢಶಾಲೆಯ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಕೇಂದ್ರ ಸಾಹಿತ್ಯ ಅಕಾಡಮಿ ಪುರಸ್ಕೃತರಾದ ಪ್ರೊ. ಟಿ.ಎಸ್. ನಾಗರಾಜಶೆಟ್ಟಿಯವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷತೆ ವಹಿಸಿ, ಪ್ರೌಢಶಾಲೆಯ ಐತಿಹಾಸಿಕ ಮೈಲಿಗಲ್ಲುಗಳನ್ನು ನೆನಪಿಸಿಕೊಟ್ಟು ಸಂತೋಷದಿಂದ ಶಿಕ್ಷಕರ ಕಾರ್ಯವೈಖರಿಗಳನ್ನು ಪರಿಗಣಿಸಿ ಪ್ರೋತ್ಸಾಹಿಸಿದರು. 2018–19ನೇ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸಾಹಿತ್ಯಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲಿ ಭಾಗವಹಿಸಿ 2019–20ನೇ ಸಾಲಿನ ಚಾಂಪಿಯನ್ ಆಗಿ ಹೊರಹೊಮ್ಮಿದ ವಿದ್ಯಾರ್ಥಿಗಳಿಗೆ ಟ್ರೋಫಿಗಳನ್ನು ಪ್ರದಾನ ಮಾಡಲಾಯಿತು.

## ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆ
ಶೇಷಾದ್ರಿಪುರಂ

### ವಿಶ್ವಮಾನವ ದಿನಾಚರಣೆ



ಶೇಷಾದ್ರಿಪುರಂ ಸ್ತ್ರೀ ಸಮಾಜ ಮಾಧ್ಯಮಿಕ ಶಾಲೆಯಲ್ಲಿ ವಿಶ್ವಮಾನವ ದಿನಾಚರಣೆಯನ್ನು ಆಚರಿಸಲಾಯಿತು. ರಸಋಷಿ ಕುವೆಂಪು ಅವರ ಜೀವನ, ಬರಹ ಮತ್ತು ಸಂದೇಶಗಳ ಬಗ್ಗೆ ಮಕ್ಕಳಲ್ಲಿ ಅರಿವು ಮೂಡಿಸಿ ಕುವೆಂಪು ಅವರ ಕೃತಿಗಳನ್ನು ಮಕ್ಕಳಿಗೆ ಪರಿಚಯಿಸಲಾಯಿತು.

## ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ
ಕುಮಾರ ಪಾರ್ಕ್, ಬೆಂಗಳೂರು

### ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆಯ ವಾರ್ಷಿಕೋತ್ಸವ



21.12.2019ರಂದು ಶಾಲೆಯ ವಾರ್ಷಿಕೋತ್ಸವವನ್ನು ಎಸ್.ಇ.ಟಿ. ಕುವೆಂಪು ರಂಗಮಂದಿರಲ್ಲಿ ಆಚರಿಸಲಾಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದರು. ಇಂಡಿಯನ್ ಆಯುರ್ವೇದ ಫೌಂಡೇಶನ್ನಿನ ಅಧ್ಯಕ್ಷರಾದ ಶೇಷಾದ್ರಿಪುರಂ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿ ಡಾ. ಸಿ.ಎ. ಕಿಶೋರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣ, ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್, ಧರ್ಮದರ್ಶಿಗಳಾದ ಕೆ. ಕೃಷ್ಣಸ್ವಾಮಿ ಉಪಸ್ಥಿತರಿದ್ದರು.

### ಬೀಳ್ಕೊಡುಗೆ ಸಮಾರಂಭ



07.03.2020ರಂದು 2019–20ರ ಶೈಕ್ಷಣಿಕ ಸಾಲಿನ 10ನೇ ತರಗತಿ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭ ನಡೆಯಿತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಸಹಾಯಕ ಕಾರ್ಯದರ್ಶಿ ಹಾಗೂ ಸುಧಾರಣಾ ಸಮಿತಿಯ ಆಧ್ಯಕ್ಷರಾದ ಎಮ್.ಎಸ್. ನಟರಾಜ್ ಅಧ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉಪನ್ಯಾಸಕರಾದ ರಘೋತ್ತಮ ರಾವ್ ಆಗಮಿಸಿ ಮಾತನಾಡಿದರು. ಪ್ರಾಂಶುಪಾಲರಾದ ವಿ. ನೇತ್ರಾಮಣಿ ವಿದ್ಯಾರ್ಥಿಗಳಲ್ಲಿ ಆತ್ಮಸ್ಥೈರ್ಯವನ್ನು ತುಂಬಿದರು.

## ಶೇಷಾದ್ರಿಪುರಂ ಸಂಯುಕ್ತ ಪದವಿ ಪೂರ್ವ ಕಾಲೇಜು
ಶೇಷಾದ್ರಿಪುರಂ

### ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ




14.01.2020ರಂದು ಶೇಷಾದ್ರಿಪುರಂ ಸಂಯುಕ್ತ ಪದವಿಪೂರ್ವ ಕಾಲೇಜಿನಲ್ಲಿ ಸ್ವಾಮಿ 'ವಿವೇಕಾನಂದ ಅಧ್ಯಯನ ಕೇಂದ್ರ'ದ ವತಿಯಿಂದ 'ಸ್ವಾಮಿ ವಿವೇಕಾನಂದರ ಜನ್ಮದಿನೋತ್ಸವ'ವನ್ನು ಆಚರಿಸಲಾಯಿತು. ಪ್ರಾಂಶುಪಾಲರಾದ ಪ್ರೊ. ಜಿ.ಕೆ. ಮಂಜುನಾಥ, ಸಂಸ್ಕೃತ ಪ್ರಾಧ್ಯಾಪಕರಾದ ಡಾ. ನಾರಾಯಣ ಕೆ.ಹೆಚ್. ಮತ್ತಿತರರು ಉಪಸ್ಥಿತರಿದ್ದರು.

**"ಹೆಜ್ಜೆಗೊಂದು ಹೊಸ ಯುಗಾದಿ ಚೆಲುವು ನಮ್ಮ ಜೀವನ! ನಮ್ಮ ಹಾದಿಯೋ ಅನಾದಿ, ಪಯಣವೆಲ್ಲ ಪಾವನ!" – ಕೆ.ಎಸ್. ನರಸಿಂಹಸ್ವಾಮಿ**

## ಶೇಷಾದ್ರಿಪುರಂ ಆಂಗ್ಲ ಪ್ರೌಢಶಾಲೆ

ಕುಮಾರ ಪಾರ್ಕ್, ಬೆಂಗಳೂರು

### ಯುವಜನ ಜಾಗೃತಿ ಸಮ್ಮೇಳನ 2019–20



18–19 ಜನವರಿ 2020ರಂದು ಸ್ವಾಮಿ ವಿವೇಕಾನಂದ ಜನ್ಮ ದಿನಾಚರಣೆಯ ಪ್ರಯುಕ್ತ ತುಮಕೂರಿನ ಮಾದೀಹಳ್ಳಿಯ ಬದರಿಕಾಶ್ರಮದಲ್ಲಿ ಯುವಜನ ಜಾಗೃತಿ ಸಮ್ಮೇಳನ ನಡೆಯಿತು. ಕಾರ್ಯಕ್ರಮದಲ್ಲಿ ಶಾಲೆಯ 8 ಮತ್ತು 9ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಡಾ. ಸಮೀರಸಿಂಹ, ಡಾ. ವೂಡೇ ಪಿ. ಕೃಷ್ಣ, ಶಂಕರಲಿಂಗೇಗೌಡ, ವಿಜಯ ಕಾಲೇಜಿನ ಪ್ರಾಂಶುಪಾಲರಾದ ವಿಜಯಕುಮಾರಿ, ಮೈಸೂರಿನ ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿಯವರು ಮತ್ತು ವಿವೇಕಾಮಯಿಯವರು ಪಾಲ್ಗೊಂಡಿದ್ದರು. ಇದೇ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆ ಆಧಾರಿತ ಪ್ರಬಂಧ ಸ್ಪರ್ಧೆ ವಿಜೇತರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಿಸಲಾಯಿತು.

## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಮತ್ತು ಪದವಿ ಕಾಲೇಜು

ಮೈಸೂರು

### 'ಕಲಾವೈಭವ' – ಕಾಲೇಜು ವಾರ್ಷಿಕೋತ್ಸವ



04.01.2020ರಂದು ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಮತ್ತು ಪದವಿ ಕಾಲೇಜಿನ 6ನೇ ವರ್ಷದ ವಾರ್ಷಿಕೋತ್ಸವ ಸಮಾರಂಭ 'ಕಲಾವೈಭವ'ವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಬಿ.ಬಿ. ಅಶೋಕ್‌ಕುಮಾರ್, ನಿವೃತ್ತ ಸಹಾಯಕ ಪೊಲೀಸ್ ಆಯುಕ್ತರು ಆಗಮಿಸಿದ್ದು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿ ಡಾ. ವೂಡೇ ಪಿ. ಕೃಷ್ಣರವರು ವಹಿಸಿದ್ದರು. ದತ್ತಿಯ ಜಂಟಿ ಕಾರ್ಯದರ್ಶಿ ಎಸ್. ಶೇಷನಾರಾಯಣ, ಸಹಾಯಕ ಕಾರ್ಯದರ್ಶಿ ನಟರಾಜ್ ಎಂ.ಎಸ್., ಧರ್ಮದರ್ಶಿ ಕೆ. ಕೃಷ್ಣಸ್ವಾಮಿ, ಡಬ್ಲ್ಯೂ.ಡಿ. ಅಶೋಕ್, ಕಾಲೇಜು ಆಡಳಿತ ಮಂಡಳಿಯ ಅಧ್ಯಕ್ಷರಾದ ಬಿ.ಎ. ಅನಂತರಾಮು, ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸೌಮ್ಯಈರಪ್ಪ ಕೆ., ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಅರ್ಚನಾಸ್ವಾಮಿ ಎನ್. ಹಾಗೂ ಕಾಲೇಜಿನ ಎಲ್ಲಾ ಉಪನ್ಯಾಸಕ ಉಪನ್ಯಾಸಕೇತರ ವರ್ಗದವರು ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿ ಕಾಲೇಜು

ಮೈಸೂರು

### ಅಪರಾಧ ತಡೆ ಮಾಸಾಚರಣೆ



27.12.2019ರಂದು ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ಹೆಬ್ಬಾಳ ಪೊಲೀಸ್ ಠಾಣಾ ಇಲಾಖೆಯ ಸಹಯೋಗದೊಂದಿಗೆ ಸಾರ್ವಜನಿಕರಲ್ಲಿ ಅಪರಾಧವನ್ನು ತಡೆಗಟ್ಟುವ ಕುರಿತು ಅರಿವು ಮೂಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಹೆಬ್ಬಾಳ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಟಿ. ಚೆಲುವೇಗೌಡರು, ಸಹಾಯಕ ಉಪನಿರೀಕ್ಷಕರಾದ ಎ.ಸಿ. ಕೃಷ್ಣೇಗೌಡರು ಮತ್ತು ಶಿವನಂಜಯ್ಯ ಆಗಮಿಸಿ ಸಾಕ್ಷ್ಯಚಿತ್ರ ಪ್ರದರ್ಶನದ ಮೂಲಕ ಜಾಗೃತಿ ಮೂಡಿಸಿದರು.

### ವಿಜಯಕರ್ನಾಟಕ ರಸ್ತೆ ಸುರಕ್ಷತಾ ಸಪ್ತಾಹ–2020



20.01.2020ರಂದು ಮೈಸೂರಿನ ವಿಜಯಕರ್ನಾಟಕ ದಿನಪತ್ರಿಕೆ ಮತ್ತು ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಶೇಷಾದ್ರಿಪುರಂ ಪದವಿ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹದ ಅಂಗವಾಗಿ 'ವಿಜಯಕರ್ನಾಟಕ ರಸ್ತೆ ಸುರಕ್ಷತಾ ಸಪ್ತಾಹ–2020' ಕಾರ್ಯಕ್ರಮ ನಡೆಯಿತು. ಮೈಸೂರು ನಗರ ಪೊಲೀಸ್ ಇಲಾಖೆಯ ಅಪರಾಧ ಮತ್ತು ಸಂಚಾರ ವಿಭಾಗದ ಉಪ ಆಯುಕ್ತರಾದ ಬಿ.ಟಿ. ಕವಿತ ಮತ್ತು ವಿಜಯಕರ್ನಾಟಕದ ಮೈಸೂರಿನ ಸ್ಥಾನಿಕ ಸಂಪಾದಕರಾದ ಸಿ.ಜೆ. ರಾಜೀವ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

### ಸ್ವಯಂ ಪ್ರೇರಿತ ರಕ್ತದಾನ ಶಿಬಿರ



30.01.2020ರಂದು ಹುತಾತ್ಮರ ದಿನಾಚರಣೆಯ ಅಂಗವಾಗಿ ಮೈಸೂರಿನ ಶೇಷಾದ್ರಿಪುರಂ ಪದವಿ ಕಾಲೇಜಿನಲ್ಲಿ ರಾಷ್ಟ್ರೀಯ ಸೇವಾ ಯೋಜನಾ ಘಟಕ ಹಾಗೂ ಜೀವಧಾರ ರಕ್ತನಿಧಿ ಮತ್ತು ಲಯನ್ಸ್ ಕ್ಲಬ್ ಇಂಟರ್‌ನ್ಯಾಶನಲ್ 3791 ಇವರ ಸಂಯುಕ್ತಾಶ್ರಯದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ನಡೆಯಿತು. ಮೈಸೂರಿನ ಮೈಕಾ ಕಾಲೇಜು, ಸೇಪಿಯೆಂಟ್ ಕಾಲೇಜು ಮತ್ತು ಕಾವೇರಿ ಕಾಲೇಜುಗಳ ವಿದ್ಯಾರ್ಥಿಗಳು ಶಿಬಿರದಲ್ಲಿ ಭಾಗವಹಿಸಿ ರಕ್ತದಾನವನ್ನು ಮಾಡಿದರು. ಅಂದು ಸುಮಾರು 89 ಯೂನಿಟ್‌ನಷ್ಟು ರಕ್ತ ಸಂಗ್ರಹಿಸಲಾಯಿತು. ಶಿಬಿರದಲ್ಲಿ ವಿದ್ಯಾರ್ಥಿಗಳು ಮಾತ್ರವಲ್ಲದೆ ಸಾರ್ವಜನಿಕರೂ ಪಾಲ್ಗೊಂಡು ರಕ್ತದಾನ ಮಾಡಿ ಶಿಬಿರದ ಯಶಸ್ಸಿಗೆ ಕಾರಣರಾಗಿದ್ದಾರೆ. ರಕ್ತದಾನ ಮಾಡಿದ ದಾನಿಗಳಿಗೆ ಜೀವಧಾರಾ ರಕ್ತನಿಧಿಯ ವತಿಯಿಂದ ಪ್ರಮಾಣ ಪತ್ರಗಳನ್ನು ವಿತರಿಸಲಾಯಿತು.

### ಸಂವಿಧಾನ ದಿನಾಚರಣೆ



23.01.2020ರಂದು ಕಾಲೇಜಿನ ಅಂಬೇಡ್ಕರ್ ಅಧ್ಯಯನ ಕೇಂದ್ರದಿಂದ 'ಸಂವಿಧಾನ ದಿನವನ್ನು' ಆಚರಿಸಲಾಯಿತು. ಕನ್ನಡಪ್ರಭ ದಿನಪತ್ರಿಕೆಯ ಮೈಸೂರಿನ ಆವೃತ್ತಿಯ ಸ್ಥಾನಿಕ ಸಂಪಾದಕರಾದ ಅಂಶಿ ಪ್ರಸನ್ನಕುಮಾರ್ ಅವರು ಮುಖ್ಯ ಅತಿಥಿಯಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಬಂದಿದ್ದ ರಾಜ್ಯಶಾಸ್ತ್ರ ಉಪನ್ಯಾಸಕರಾದ ದೊಡ್ಡಬೋರಯ್ಯ ಉಪನ್ಯಾಸ ನೀಡಿದರು.

"You have to grow from inside out. None can teach you, none can make you spiritual. There is no other teacher but your own soul." – Swami Vivekananda

## ಶೇಷಾದ್ರಿಪುರಂ ಕಾಮರ್ಸ್ ಕಾಲೇಜು

ಮಾಗಡಿ ರಸ್ತೆ

### ರಾಷ್ಟ್ರಮಟ್ಟದ ವಿಚಾರ ಸಂಕಿರಣ




12 – 13 ಫೆಬ್ರವರಿ 2020ರಂದು ಮಾಗಡಿ ರಸ್ತೆಯ ಶೇಷಾದ್ರಿಪುರಂ ಕಾಮರ್ಸ್ ಕಾಲೇಜಿನಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿ, ಜೈನ ಸಾಹಿತ್ಯ ಸಂಸ್ಕೃತಿ ಅಧ್ಯಯನ ಕೇಂದ್ರ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರ ಸಹಯೋಗದಲ್ಲಿ 'ಜೈನಧರ್ಮ: ಶಿಷ್ಟ ಮತ್ತು ಜಾನಪದ ಸಾಹಿತ್ಯ' ಎಂಬ ವಿಷಯವನ್ನು ಕುರಿತು ರಾಷ್ಟ್ರಮಟ್ಟದ ವಿಚಾರ ಸಂಕಿರಣ ನಡೆಯಿತು. ನಾಡೋಜ ಹಂ.ಪ. ನಾಗರಾಜಯ್ಯ ಅವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ, ಜೈನ ಪದದ ಅರ್ಥ, ಹಿನ್ನೆಲೆಗಳನ್ನು ತಿಳಿಸಿದರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಡಾ. ಸ.ಚಿ. ರಮೇಶ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ, ತಮ್ಮ ಭಾಷಣದಲ್ಲಿ ಜೈಧರ್ಮವನ್ನು ಕುರಿತ ವಿಚಾರ ಸಂಕಿರಣದ ಉದ್ದೇಶ ಮತ್ತು ಮಹತ್ವವನ್ನು ವಿವರಿಸಿದರು.

ಮುಖ್ಯ ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣ ಭಾಗವಹಿಸಿ ಮಹಾತ್ಮ ಗಾಂಧಿಯವರ ವ್ಯಕ್ತಿತ್ವ ರೂಪುಗೊಳ್ಳುವಲ್ಲಿ ಜೈನಧರ್ಮದ ಪ್ರಭಾವದ ಬಗ್ಗೆ ಮಾಹಿತಿ ನೀಡಿದರು. ನಾಡೋಜ ಕಮಲಾ ಹಂಪನಾ ಅವರು ತಮ್ಮ ಹಾಸ್ಯಮಿಶ್ರಿತ ಮಾತುಗಳಿಂದ ಸಭೆಯನ್ನು ನಗೆಯ ಕಡಲಲ್ಲಿ ಮುಳುಗಿಸಿದ್ದು ವಿಶೇಷವಾಗಿತ್ತು. ವಿಶ್ರಾಂತ ಪ್ರಾಧ್ಯಾಪಕರು, ಹಿರಿಯ ವಿದ್ವಾಂಸರಾದ ಡಾ. ಪದ್ಮಪ್ರಸಾದ್, ಜೈನ ಧರ್ಮದ ಶಿಷ್ಟ ಮತ್ತು ಜಾನಪದ ಸಾಹಿತ್ಯದ ಮಹತ್ವವನ್ನು ವಿವರಿಸಿದರು.

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು

ಯಲಹಂಕ

### 'ವಿಸ್ಮಯ ಪ್ರಪಂಚ' ವಸ್ತುಪ್ರದರ್ಶನ



05.03.2020ರಂದು ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜಿನಲ್ಲಿ ಜೆ. ದಶರಥ ಸಿಂಗ್ ಅವರು ಸಂಗ್ರಹಿಸಿರುವ ವಿನೂತನ ಹಾಗೂ ವೈವಿಧ್ಯಮಯವಾದ ವಸ್ತುಗಳ ಪ್ರದರ್ಶನದ ಉದ್ಘಾಟನೆಯನ್ನು ಹಮ್ಮಿಕೊಳ್ಳಲಾಗಿತ್ತು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೆ ಪಿ. ಕೃಷ್ಣ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ದಶರಥ್ ಸಿಂಗ್ ಅವರು ಮಾತನಾಡಿ "ನನಗೆ ಚಿಕ್ಕವಯಸ್ಸಿನಿಂದ ವಸ್ತುಗಳನ್ನು ಸಂಗ್ರಹಿಸುವುದು ಹವ್ಯಾಸವಾಗಿದೆ. ಬೆಲೆಕಟ್ಟಲಾಗದ ಈ ವಸ್ತುಗಳನ್ನು ಕಾಪಾಡಿಕೊಳ್ಳಲು ನನ್ನ ಮುಂದಿನ ಪೀಳಿಗೆ ಇಷ್ಟಪಡುವುದಿಲ್ಲ. ಧರ್ಮಸ್ಥಳದ ವಸ್ತು ಸಂಗ್ರಹಾಲಯಕ್ಕೆ ದಾನವಾಗಿ ಕೊಡುತ್ತೇನೆ" ಎಂದು ತಿಳಿಸಿದರು. ಸೇವಕ್ ಸಂಸ್ಥೆ ಅಧ್ಯಕ್ಷರಾದ ವೀರಭದ್ರಯ್ಯನವರು ದಶರಥ ಸಿಂಗ್ ಅವರ ಸಾಧನೆಯನ್ನು ಶ್ಲಾಘಿಸಿದರು. ಪ್ರಾಂಶುಪಾಲರು ಇಂತಹ ಕಾರ್ಯಕ್ರಮವನ್ನು ಆಯೋಜಿಸಲು ಡಾ. ವೂಡೆ ಪಿ. ಕೃಷ್ಣರವರು ತಮ್ಮ ಕಾಲೇಜನ್ನು ಆಯ್ಕೆ ಮಾಡಿಕೊಂಡಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದರು.

### 27ನೇ ವಾರ್ಷಿಕ ಮಹೋತ್ಸವ – 'ಸೃಜನ 2019'




ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, ಯಲಹಂಕದಲ್ಲಿ 27ನೇ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ವಿದ್ಯಾಶಂಕರ್ ಎಸ್., ಆಗಮಿಸಿದ್ದರು. ಈ ಸಮಾರಂಭದಲ್ಲಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವಾನ್ವಿತ ಅಧ್ಯಕ್ಷರಾದ ಎನ್.ಆರ್. ಪಂಡಿತಾರಾಧ್ಯ ಹಾಗೂ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್ ಹಾಗೂ ಕಾಲೇಜಿನ ಪ್ರಾಂಶುಪಾಲರಾದ ಟಿ. ದೊಡ್ಡೇಗೌಡರು ಉಪಸ್ಥಿತರಿದ್ದರು.

### ರಾಷ್ಟ್ರೀಯ ಯುವದಿನ ಕಾರ್ಯಕ್ರಮ




14.1.2020ರಂದು ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಸ್ವಾಮಿ ವಿವೇಕಾನಂದರ 157ನೇ ಜನ್ಮದಿನಾಚರಣೆಯ ನಿಮಿತ್ತ 'ರಾಷ್ಟ್ರೀಯ ಯುವದಿನ' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಶ್ರೀ ಭವತಾರಿಣಿ ಆಶ್ರಮದ ಅಧ್ಯಕ್ಷರಾದ ಮಾತಾ ವಿವೇಕಮಯಿಯವರು ಹಾಗೂ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳಾದ ಡಬ್ಲ್ಯೂ.ಡಿ. ಅಶೋಕ್‌ರವರು ಆಗಮಿಸಿದ್ದರು. ಮಾತಾ ವಿವೇಕಮಯಿಯವರು "ಹುಟ್ಟಿನಿಂದಲೇ ಎಲ್ಲರೂ ಸಬಲರಲ್ಲ, ಬೆಳೆಯುತ್ತ ನಿರಂತರ ಪ್ರಯತ್ನದಿಂದ ವ್ಯಕ್ತಿತ್ವ ವಿಕಸನವಾಗುತ್ತದೆ" ಎಂದು ವಿದ್ಯಾರ್ಥಿಗಳ್ನು ಉದ್ದೇಶಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಟಿ. ದೊಡ್ಡೇಗೌಡರು ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪ್ರಥಮ ದರ್ಜೆ ಕಾಲೇಜು

ಯಲಹಂಕ

### ಗಾಂಧಿ 150ನೇ ಜನ್ಮದಿನಾಚರಣೆ ಪ್ರಯುಕ್ತ ನಾಟಕ ಪ್ರದರ್ಶನ



24.02.2020ರಂದು ಕಾಲೇಜಿನ ಕನ್ನಡ ಸಂಘ ಹಾಗೂ ಗಾಂಧಿ ಅಧ್ಯಯನ ಕೇಂದ್ರವು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆಗಳ ಸಹಯೋಗದಲ್ಲಿ ಬೊಳುವಾರು ಮೊಹಮದ್ ಕುಂಞ ಅವರ ಕೃತಿ ಆಧಾರಿತ 'ಪಾಪುಬಾಪು' ನಾಟಕದ ಪ್ರದರ್ಶನ ಮತ್ತು ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಶಿವಮೊಗ್ಗದ ರಂಗಾಯಣ ಕಲಾವಿದರು ನಾಟಕವನ್ನು ಪ್ರದರ್ಶಿಸಿದರು.

### ಸಾಕ್ಷ್ಯಚಿತ್ರ ಪ್ರದರ್ಶನ



02.03.2020ರಂದು ಕಾಲೇಜಿನ ಕನ್ನಡ ಸಂಘ ಹಾಗೂ 'ಬೆಳ್ಳಿಸಾಕ್ಷಿ' ಸಿನೆಮಾ ಕ್ಲಬ್‌ಗಳ ಸಹಯೋಗದಲ್ಲಿ ಸರಳವಿರಳ ಸರಣಿಯ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು. ಸಾವಯವ ಕೃಷಿ ತಜ್ಞರಾದ ಎಲ್. ನಾರಾಯಣ ರೆಡ್ಡಿಯವರ ವ್ಯಕ್ತಿಚಿತ್ರವನ್ನು ಪ್ರದರ್ಶಿಸಿ ಯೂಟ್ಯೂಬ್‌ಗೆ ಬಿಡುಗಡೆ ಮಾಡಲಾಯಿತು. ಸಿನೆಮಾ ನಿರ್ದೇಶಕರಾದ ಈರೇಗೌಡ, ಪತ್ರಕರ್ತರಾದ ಗಿರೀಶ್ ಹತ್ವಾರ್, ನಿರ್ಮಾಪಕಿ ಮತ್ತು ಲೇಖಕಿ ಎಚ್.ಆರ್. ಸುಜಾತ ಕಾರ್ಯಕ್ರಮಕ್ಕೆ ಆಗಮಿಸಿದ್ದರು.

"ಬೆವರ ಹೀರಿ ಬೆಳೆದ ಪೈರು ಕಣಕಣದಲಿ ಹೊನ್ನ ತೇರು. ಕಣಜ ತುಂಬಿ ತುಳುಕಿ ಹಿಗ್ಗಿ ನಾಡಿಗೊದಗಿ ಬಂತು ಸುಗ್ಗಿ" – ಕೆ.ಎಸ್. ನಿಸಾರ್ ಅಹಮದ್

## ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜು
ಕೆಂಗೇರಿ

### ಕಾಲೇಜು ವಾರ್ಷಿಕೋತ್ಸವ – 'ಅನುಬಂಧ 2019–20'




31.12.2019ರಂದು 'ಅನುಬಂಧ 2019–20' ಕಾಲೇಜು ವಾರ್ಷಿಕೋತ್ಸವ ಸಮಾರಂಭವನ್ನು ಶೇಷಾದ್ರಿಪುರಂ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಭಾರತ ಸರ್ಕಾರದ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಧೀಶರು ಮತ್ತು ಲೋಕಾಯುಕ್ತರಾದ ಡಾ. ಎನ್. ಸಂತೋಷ್ ಹೆಗಡೆಯವರು ಆಗಮಿಸಿ 'ಸಮಾಜ ಒಳ್ಳೆಯ ರೀತಿಯಲ್ಲಿ ಸಾಗಲು ಸಂವಿಧಾನದ ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗದೊಂದಿಗೆ ಮಾನವೀಯ ಮೌಲ್ಯಗಳ ಮೂಲಕ ಯುವ ಪೀಳಿಗೆಯು ಸಮಾಜವನ್ನು ಕಟ್ಟಬೇಕೆಂದು' ವಿದ್ಯಾರ್ಥಿಗಳಿಗೆ ತಿಳಿಸಿದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಶಿಕ್ಷಣ ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್, ಧರ್ಮದರ್ಶಿಗಳಾದ ಕೆ. ಕೃಷ್ಣಸ್ವಾಮಿ, ಡಬ್ಲ್ಯೂ.ಡಿ. ಅಶೋಕ್, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ. ಆರ್. ಮಂಜುನಾಥ ಮತ್ತು ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಯರಾಮ್ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಶಿಕ್ಷಣ ದತ್ತಿ
ಶೇಷಾದ್ರಿಪುರಂ

### ದಿ|| ಕೆ.ಎಂ. ನಂಜಪ್ಪರವರ ಸ್ಮರಣಾರ್ಥ ಬೃಹತ್ ರಕ್ತದಾನ ಮೇಳ



31.1.2020ರಂದು ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ವತಿಯಿಂದ ಸಂಸ್ಥೆಯ ಮಾಜಿ ಅಧ್ಯಕ್ಷರು ಹಾಗೂ ಮಾಜಿ ಮೇಯರ್ ದಿ. ಶ್ರೀ ಕೆ.ಎಂ. ನಂಜಪ್ಪರವರ 108ನೇ ಜನ್ಮದಿನಾಚರಣೆ ಪ್ರಯುಕ್ತ ಬೃಹತ್ ರಕ್ತದಾನ ಮೇಳ ನಡೆಯಿತು. ಸುಮಾರು 700 ಯೂನಿಟ್‌ಗಳಿಗೂ ಹೆಚ್ಚು ರಕ್ತವನ್ನು ಅಂದು ಸಂಗ್ರಹಿಸಲಾಯಿತು. ಭಾರತೀಯ ರೆಡ್‌ಕ್ರಾಸ್‌ನ ಅಧ್ಯಕ್ಷರು ಎಸ್. ನಾಗಣ್ಣ ಮತ್ತು ಡಾ. ರಾಜು ಚಂದ್ರಶೇಖರ್, ಉಪ–ಕುಲಸಚಿವರು ಡಾ. ವಸಂತ್ ಶೆಟ್ಟಿ, ರೋಟರಿ ಮಿಡ್‌ಟೌನ್ ಅಧ್ಯಕ್ಷರು ರೋಟೇರಿಯನ್ ಕಮಲ್ ಭಂಡಾರಿ ಹಾಗೂ ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಯ ಗೌರವ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್, ಧರ್ಮದರ್ಶಿ ಮಂಡಳಿಯ ಜಿ. ಪರಮಶಿವಯ್ಯ ಹಾಗೂ ಪಿ.ಸಿ. ನಾರಾಯಣ ಮತ್ತು ಪ್ರಾಂಶುಪಾಲರುಗಳು, ಉಪಾಧ್ಯಾಯರು ಹಾಗೂ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು
ತುಮಕೂರು

### 'ಅಭಿಜ್ಞಾ 2019–2020'



ತುಮಕೂರಿನ ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ 'ಅಭಿಜ್ಞಾ 2019–2020' ಸಮಾರಂಭ ನಡೆಯಿತು. ಮುಖ್ಯ ಅತಿಥಿಗಳಾಗಿ ತುಮಕೂರು ಜಿಲ್ಲಾ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪ–ನಿರ್ದೇಶಕಿ ಲಲಿತಾಕುಮಾರಿ ಮತ್ತು ಬೆಂಗಳೂರಿನ ಮಾನಸ್ ತರಬೇತಿ ಮತ್ತು ಅಭಿವೃದ್ಧಿ ಕೇಂದ್ರದ ನಿರ್ದೇಶಕ ರಘೋತ್ತಮರಾವ್ ಕಾಶಿ ಭಾಗವಹಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿ ಡಬ್ಲ್ಯೂ.ಡಿ. ಅಶೋಕ್ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಸಮಾರಂಭದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಸವರಾಜು ಬಿ.ವಿ., ಶೇಷಾದ್ರಿಪುರಂ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಜಗದೀಶ ಜಿ.ಟಿ., ಶೇಷಾದ್ರಿಪುರಂ ಶಾಲೆಯ ಪ್ರಾಂಶುಪಾಲರಾದ ನಂದಾರಾಜ್ ಉಪಸ್ಥಿತರಿದ್ದರು.

## ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು, (ಮುಖ್ಯ)
ಶೇಷಾದ್ರಿಪುರಂ

### ಕಾಲೇಜು ವಾರ್ಷಿಕೋತ್ಸವ – 'ಅಂಬರ'




22.12.2019ರಂದು ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನಲ್ಲಿ 'ಅಂಬರ' ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ರಾಜೀವ್‌ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ಮಾಜಿ ನಿರ್ದೇಶಕರು ಮತ್ತು ಶಿಕ್ಷಣತಜ್ಞರು ಬರಹಗಾರರೂ ಆದ ಡಾ. ಕೆ.ಪಿ. ಪುತ್ತೂರಾಯ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಪ್ರಧಾನ ಕಾರ್ಯದರ್ಶಿಗಳಾದ ಡಾ. ವೂಡೇ ಪಿ. ಕೃಷ್ಣರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಗೌರವ ಅತಿಥಿಗಳಾಗಿ ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಗೌರವ ಸಹಾಯಕ ಕಾರ್ಯದರ್ಶಿಗಳಾದ ಎಂ.ಎಸ್. ನಟರಾಜ್, ಧರ್ಮದರ್ಶಿ ಕೆ. ಕೃಷ್ಣಸ್ವಾಮಿ ಮತ್ತು ನಿವೃತ್ತ ಪ್ರಾಂಶುಪಾಲರಾದ ಪ್ರೊ. ಪಿ. ನಾರಾಯಣಸ್ವಾಮಿ ಅವರು ಆಗಮಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಆರ್.ವಿ. ಮಂಜುನಾಥ್‌ರವರು ಎಲ್ಲರನ್ನೂ ಸ್ವಾಗತಿಸಿದರು.

### ಹಿರಿಯ ಲೇಖಕರೊಂದಿಗೆ ಸಂವಾದ ಕಾರ್ಯಕ್ರಮ



23.01.2020ರಂದು ಕರ್ನಾಟಕ ಲೇಖಕಿಯರ ಸಂಘವು ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನ ಸಹಯೋಗದೊಂದಿಗೆ ಹಿರಿಯ ಲೇಖಕಿ ನುಗ್ಗೇಹಳ್ಳಿ ಪಂಕಜ ಅವರಿಗೆ ಅಭಿನಂದನೆ ಮತ್ತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮವನ್ನು ಏರ್ಪಡಿಸಿತ್ತು. ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾದ ವನಮಾಲ ಸಂಪನ್ನಕುಮಾರ್, ಪ್ರಾಂಶುಪಾಲರಾದ ಪ್ರೊ. ಆರ್.ವಿ. ಮಂಜುನಾಥ್ ಉಪಸ್ಥಿತರಿದ್ದರು.

### ರಾಜ್ಯ ಮಟ್ಟದ ಉಪನ್ಯಾಸಕರ ತರಬೇತಿ ಕಾರ್ಯಕ್ರಮ



2019–20ನೇ ಶೈಕ್ಷಣಿಕ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರಿಗೆ ಪುನಃಶ್ಚೇತನ ಮತ್ತು ದ್ವಿತೀಯ ಪಿಯುಸಿ ಪರೀಕ್ಷಾ ಫಲಿತಾಂಶ ಉತ್ತಮಪಡಿಸುವ ಪ್ರಯುಕ್ತ ಗಣಕ ವಿಜ್ಞಾನ ವಿಷಯದ ಎರಡು ದಿನಗಳ ತರಬೇತಿ ಕಾರ್ಯಕ್ರಮವನ್ನು ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜಿನಲ್ಲಿ ಹಮ್ಮಿಕೊಳ್ಳಲಾಗಿತ್ತು. ಇಲ್ಲಿನ ಗಣಕ ವಿಜ್ಞಾನ ಉಪನ್ಯಾಸಕರಾದ ಉದಯಕುಮಾರ್ ಅವರು ರಾಜ್ಯಮಟ್ಟದ ಸಂಚಾಲಕ ಮತ್ತು ಸಂಪನ್ಮೂಲ ವ್ಯಕ್ತಿಯಾಗಿ ತರಬೇತಿಯನ್ನು ನಡೆಸಿದರು. ಪಪೂ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಅಸಾದುಲ್ಲಾ ಖಾನ್, ಸಹಾಯಕ ನಿರ್ದೇಶಕರಾದ ಜಿಯಾ ಖಾನ್ ಅತಿಥಿಗಳಾಗಿ ಆಗಮಿಸಿದ್ದರು. ಪ್ರಾಂಶುಪಾಲರಾದ ಪ್ರೊ. ಆರ್.ವಿ. ಮಂಜುನಾಥ್ ಉಪಸ್ಥಿತರಿದ್ದರು.

"Nothing else is necessary but these – Love , Sincerity, and Patience." – Swami Vivekananda

# Reports

## ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್

ಕೆಂಗೇರಿ

### ರಕ್ತದಾನ ಮತ್ತು ಉಚಿತ ನೇತ್ರ ತಪಾಸಣಾ ಶಿಬಿರ



06.02.2020ರಂದು ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಸ್ಟಡೀಸ್ ಕಾಲೇಜಿನಲ್ಲಿ ದಿವಂಗತ ಕೆ. ಎಂ. ನಂಜಪ್ಪನವರ ಸ್ಮರಣಾರ್ಥ ಸ್ವಯಂ ಪ್ರೇರಿತ ರಕ್ತದಾನ ಶಿಬಿರ ಹಾಗೂ ಉಚಿತ ನೇತ್ರ ತಪಾಸಣಾ ಶಿಬಿರ ನಡೆಯಿತು. ಕಾಲೇಜಿನ ಐ.ಕ್ಯೂ.ಎ.ಸಿ, ಯೂತ್ ರೆಡ್‌ಕ್ರಾಸ್ ಯೂನಿಟ್, ಕರ್ನಾಟಕ ವಾಲೆಂಟರಿ ಬ್ಲಡ್ ಡೋನರ್ಸ್ ಅಸೋಸಿಯೇಷನ್, ಕಬ್ಬನ್‌ಪಾರ್ಕ್ ರೋಟರಿ ಕ್ಲಬ್, ಬಿಬಿಎಂಪಿ ಹಾಗೂ ವರ್ಲ್ಡ್ ವೆಲ್‌ಫೇರ್ ಟ್ರಸ್ಟ್ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರವನ್ನು ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಧರ್ಮದರ್ಶಿಗಳಾದ ಡಬ್ಲ್ಯೂ.ಡಿ. ಅಶೋಕ್ ಉದ್ಘಾಟಿಸಿ, ವಿದ್ಯಾರ್ಥಿಗಳು ರಕ್ತದಾನ ಮಾಡಿ ಬೇರೆಯವರ ಜೀವ ಉಳಿಸುವಂತಹ ಮಹತ್ಕಾರ್ಯದಲ್ಲಿ ಭಾಗಿಯಾಗಬೇಕೆಂದು ತಿಳಿಸಿದರು. ಶಿಬಿರದಲ್ಲಿ ಮುಖ್ಯ ಅತಿಥಿಗಳಾಗಿ ಕರ್ನಾಟಕ ಸ್ವಯಂರಕ್ತದಾನ ಸಂಸ್ಥೆಯ ಅಧ್ಯಕ್ಷರಾದ ಡಾ. ರಾಜುಚಂದ್ರಶೇಖರ್, ಪ್ರಾಂಶುಪಾಲರಾದ ಪ್ರೊ. ಜಯರಾಮ್, ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಮಂಜುನಾಥ್ ಆರ್. ಉಪಸ್ಥಿತರಿದ್ದರು. ರಕ್ತದಾನ ಮೇಳದಲ್ಲಿ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರಿಂದ 200 ಯೂನಿಟ್ಸ್ ರಕ್ತವನ್ನು ಸಂಗ್ರಹಿಸಿ ವಿವಿಧ ಆಸ್ಪತ್ರೆಗಳಿಗೆ ಕಳುಹಿಸಿಕೊಡಲಾಯಿತು.

## ಶೇಷಾದ್ರಿಪುರಂ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್‌ಮೆಂಟ್

ಶೇಷಾದ್ರಿಪುರಂ

### ರಾಷ್ಟ್ರೀಯ ಸೇವಾ ಯೋಜನಾ ಘಟಕದ ಸ್ವಯಂ ಸೇವಕರಿಗೆ ಓರಿಯೆಂಟೇಷನ್ ಕಾರ್ಯಕ್ರಮ



10.01.2020ರಂದು ರಾಜ್ಯ ಎನ್.ಎಸ್.ಎಸ್. ಕೋಶ ಮತ್ತು ಕಾಲೇಜಿನ ಎನ್.ಎಸ್.ಎಸ್. ಘಟಕದ ಸಹಯೋಗದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂ ಸೇವಕರಿಗೆ ಯುನಿಸೆಫ್ ಯೋಜನೆಯನ್ನು ಕುರಿತ ಓರಿಯೆಂಟೇಷನ್ ಕಾರ್ಯಕ್ರಮ ನಡೆಯಿತು. ವಿಶೇಷ ಆಹ್ವಾನಿತರಾಗಿ ರಾಜ್ಯ ಎನ್.ಎಸ್.ಎಸ್. ಕೋಶದ ಎನ್.ಎಸ್.ಎಸ್. ಅನುಷ್ಠಾನ ಅಧಿಕಾರಿಗಳಾದ ಡಾ. ಪೂರ್ಣಿಮಾ ಜೋಗಿ ಆಗಮಿಸಿ ಯುನಿಸೆಫ್‌ನ ಪರಿಚಯ ಮಾಡಿಸಿ, ಕರ್ನಾಟಕದ ಆಯ್ದ ಜಿಲ್ಲೆಗಳ ಮಕ್ಕಳಲ್ಲಿರುವ ಅಪೌಷ್ಠಿಕತೆ, ಬಾಲ ಕಾರ್ಮಿಕ ಪದ್ಧತಿ, ಬಾಲ್ಯ ವಿವಾಹ ಪದ್ಧತಿ ಇವುಗಳನ್ನು ಕುರಿತು ಸ್ವಯಂ ಸೇವಕರು ಜನರಲ್ಲಿ ಯಾವ ರೀತಿ ಜಾಗೃತಿ ಉಂಟುಮಾಡಬೇಕು ಎಂಬ ಅರಿವು ಮೂಡಿಸಿದರು. ಹಾಗೂ ಕರ್ನಾಟಕ ಸರ್ಕಾರದ ರಾಜ್ಯ ಎನ್.ಎಸ್.ಎಸ್. ಕೋಶದ ಸಂಪರ್ಕಾಧಿಕಾರಿಗಳಾದ ಡಾ. ಗಣನಾಥ ಯೆಕ್ಕಾರು ಸ್ವಯಂ ಸೇವಕರನ್ನು ಉದ್ದೇಶಿಸಿ ಮಾತನಾಡುತ್ತ ಮಾನವ ಸಂಪನ್ಮೂಲ ಅಭಿವೃದ್ಧಿ ಮಾಡುವಲ್ಲಿ ಸರ್ಕಾರದ ಜೊತೆಗೆ ಯುವಜನಾಂಗ ಹೇಗೆ ಸಹಕರಿಸಬಹುದು ಎಂಬುದಕ್ಕೆ ಯುನಿಸೆಫ್ ಯೋಜನೆ ಒಂದು ಉತ್ತಮ ನಿದರ್ಶನ ಎಂದರು. ಪ್ರಾಂಶುಪಾಲರಾದ ಪ್ರೊ. ವಿದ್ಯಾ ಶಿವಣ್ಣವರ್ ಮಾತನಾಡಿ ತಮ್ಮ ಕಾಲೇಜಿಗೆ ಈ ಯೋಜನೆ ದೊರೆತಿರುವುದು ಹರ್ಷ ತಂದಿದೆ ಎಂದು ತಿಳಿಸಿದರು.

## Seshadripuram Academy for Global Excellence (S.A.G.E.)

Seshadripuram Academy for Global Excellence is the flagship institute under the aegis of the Seshadripuram Educational Trust. S.A.G.E. was established in the year 2009 and in the 10 years of its existence, nearly 150 students have graduated from the institute. Through this global exposure, they become familiar with diverse cultures, thereby raising their stature and quality to be at par with the best in the world. Students are thus exposed to a whole new area of learning which brightens their job prospects in India and abroad and helps in creating global graduates who are future-ready. The Global partners of SAGE are as follows:

### University Collaborations

**Southwestern Oklahoma State University**

Southwestern Oklahoma State University was founded in 1901. It has 80 acres of pristine campus at the centre of Western Oklahoma in the serene city, Weatherford. Accredited by the International Assembly for Collegiate Business education it is a credible seat of learning, designed for those who desire an advanced programme in business commensurate with their career objectives.

Course Offered: Master of Business Administration (M.B.A.)

Programme Highlights:

- SWOSU is one of the top 10 Business Schools in the State of Oklahoma.
- SWOSU campus offers a friendly academic environment along with on-campus jobs.
- Candidates will be admitted bi-annually (January – Spring Intake & August – Fall Intake)
- For more information on SWOSU, visit www.swosu.edu

### University of Central Oklahoma

The University of Central Oklahoma, often referred to as UCO or Central, is a coeducational public university located in Edmond, Oklahoma. Founded in 1890, the University of Central Oklahoma was one of the first institutions of higher learning to be established in what would become the state of Oklahoma, making it one of the oldest universities in the southwest region of the United States.

Course Offered: Master of Science – Computer Science (M.S., C.S.)



Programme Highlights:

- UCO is one of the top 3 public institutions in the state of Oklahoma.
- UCO campus offers a friendly academic environment along with on-campus jobs.
- UCO also offers research and teaching assistance opportunities for students.
- Candidates will be admitted bi-annually (January – Spring Intake & August – Fall Intake)
- 3 years of full time work permit in the U.S.A. without change of visa.
- For more information on UCO, visit www.uco.edu

### Texas A & M University

Texas A & M University (TAMU) is a public research university in College Station, Texas, United States. The Texas A & M system endowment is among the 10 largest endowments in the nation. The first public institution of higher education in Texas, the school opened on October 4, 1876. The main campus is one of the largest in the United States, spanning 5,200 acres, and is home to the George Bush Presidential Library.

Course Offered: Master of Jurisdiction (M-JUR)

Programme Highlights:

- M - JUR focuses on specialisation in Intellectual Property Rights.
- 1 year of full time work permit in the USA without change of visa.
- Candidates will be admitted bi-annually (January – Spring Intake & August – Fall Intake)
- For more information on TAMU, visit www.tamu.edu/

For Admissions and Further Enquiries: Contact: Mr. Akash Vasan – Programme Coordinator, SAGE
M: +919606203860 | E: akashvasan06@gmail.com, info@sage.ac.in

"ಮಾವೊಂದೇ ಚಿಗುರಲಲ್ಲ, ಚಿಗುರುತ್ತಿದೆ ಬೇವು. ನಲಿವೊಂದೇ ಹರಸಲಲ್ಲ, ಜತೆಯಲ್ಲಿತ್ತು ನೋವು" – ಕೆ.ಎಸ್. ನರಸಿಂಹಸ್ವಾಮಿ